ರಾಜ್ಯ ಮತ್ತು ಜಿಲ್ಲಾ ಮಟ್ಟದ ಪರಿಹಾರ ವೇದಿಕೆಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲು ಕ್ರಮವಾಗಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಮತ್ತು ಜಿಲ್ಲಾ ನ್ಯಾಯಾಧೀಶರು ಅಥವಾ ಜಿಲ್ಲಾ ನ್ಯಾಯಾಧೀಶರಾಗಲು ಅರ್ಹರಾಗಿರುವವರ ಅವಶ್ಯವಿದೆ. ಆದ್ದರಿಂದ ಪರಿಹಾರ ವೇದಿಕೆಗಳನ್ನು ರಚಿಸಲು ಉಚ್ಚ-ನ್ಯಾಯಾಲದ ಜೊತೆ ಸಮಾಲೋಚನೆ ಮಾಡಿ ರಚಿಸಬೇಕಾಗುತ್ತದೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಗ್ರಾಹಕರ ಹಿತಚಿಂತನೆಯ ಬಗ್ಗೆ ಸರ್ಕಾರಕ್ಕೂ ಕಾಳಜಿ ಇದ್ದು, ಗ್ರಾಹಕರ ರಕ್ಷಣಾ ಮಂಡಳಿ ರಚನೆಯನ್ನು ಜಾರಿಗೊಳಿಸುವಲ್ಲಿ ಕ್ರಮ ವಹಿಸಲಾಗುತ್ತಿದೆ.

5) ಹೆಗ್ಗಡ ದೇವನ ಕೋಟೆ ತಾಲ್ಲೂಕಿನ ಕಬಿನಿ ತಾಲ್ಲೂಕಿನ ಹಂಪಾಪುರ ಹೋಬಳಿ ದೊಡ್ಡ ಕೆರೆ ಒಡೆದು ವಿಷಾನುಗಾರಿಕೆಯನ್ನು ನಂಬಿ ಕೊಂಡಿರುವವರು ಬೀದಿ ಪಾಲಾಗಿರುವುದು.

ಶ್ರೀ ಎಂ. ಶಿವಣ್ಣ.—ಮೈಸೂರು ಜಿಲ್ಲೆ ಹೆಗ್ಗಡದೇವನ ಕೋಟೆ ತಾಲ್ಲೂಕಿನ ಕಬಿನಿ ಕಾಲೋನಿಯಲ್ಲಿರುವ ಮೀನುಗಾರಿಕೆ ತರಬೇತಿ ಕೇಂದ್ರದಲ್ಲಿ ವಿಶೇಷ ಘಟಕ ಯೋಜನೆಯಲ್ಲಿ ೧೫ ಮಂದಿಗೆ ಮೀನುಗಾರಿಕೆ ತರಬೇತಿಯನ್ನು ನೀಡಲಾಯಿತು. ನಂತರ ಈ ತಾಲ್ಲೂಕಿನ ಹಂಪಾಪುರ ಹೋಬಳಿ ಕರಿಗಳ ದೊಡ್ಡ ಕೆರೆಯನ್ನು ತರಬೇತಿ ಪಡೆದವರಿಗೆ ಗುತ್ತಿಗೆಗಾಗಿ ನೀಡಲಾಯಿತು. ಇವರ ಮೀನುಗಾರಿಕೆಗಾಗಿ ಕಾವೇರಿ ಗ್ರಾಮೀಣ ಬ್ಯಾಂಕಿನಿಂದ ತಲಾ ೬೦೦ ರೂಪಾಯಿಗಳಂತೆ ಸಾಲವನ್ನು ಪಡೆಯಲಾಯಿತು. ಈ ಕೆರೆಯಲ್ಲಿ ಮೀನು ಗಾರಿಕೆಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಸಂದರ್ಭದಲ್ಲಿ ತಾರೀಖು ೧೯-೧೧-೮೭ರಲ್ಲಿ ಭಾರಿ ಮಳೆಯಿಂದ ಕೆರೆ ಒಡೆದು ಹೋಗಿ ಮೀನುಗಾರಿಕೆ ನಂಬಿ ಜೀವನ ಸಾಗಿಸುತ್ತಿದ್ದ ಈ ಯುವಕರು ಈಗ ಬೀದಿಪಾಲಾಗಿದ್ದಾರೆ.

ಮೀನುಗಾರರ ಸಂಕಷ್ಟ ಪರಿಹಾರ ನಿಧಿಯಿಂದ ನಿರ್ದೇಶಕರು ಧನ ಸಹಾಯ ನೀಡಬಹುದಾಗಿದೆ ಎಂದು ಉಪನಿರ್ದೇಶಕರು, ಮೈಸೂರು, ಇವರು ನಿರ್ದೇಶಕರಿಗೆ ಬರೆದು ತಿಳಿಸಿರುತ್ತಾರೆ ಎಂದು ತಿಳಿದು ಬಂದಿದೆ.

ಆದ್ದರಿಂದ ಕೂಡಲೇ ಪರಿಹಾರ ಸಾಲಭ್ಯವಲ್ಲದೆ ಈ ಯುವಕರಿಗೆ ಬೇರೆ ಮಾರ್ಗವನ್ನು ಕೋರಲು ಕ್ರಮಕೈಗೊಳ್ಳಬೇಕೆಂದು ಮಾನ್ಯ ಬಂದರು ಹಾಗೂ ಮೀನುಗಾರಿಕೆ ಅಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಯವರಿಂದ ಉತ್ತರವನ್ನು ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ.

6) ಬೆಂಗಳೂರು ಮಿನರ್ವಮಿಲ್ ಹತ್ತಿಗಿರಣಿಯನ್ನು ಮ್ಯಾನೇಜ್‌ಮೆಂಟ್‌ನವರು ಅಕ್ರಮವಾಗಿ ಲಾಕೌಟ್ ಮಾಡಿರುವುದರ ಬಗ್ಗೆ ಕಾರ್ಮಿಕರ ಪ್ರತಿಭಟನೆ

ಶ್ರೀ ಆರ್. ವೆಂಕಟರಾಮಯ್ಯ.—ಬೆಂಗಳೂರು ಮಿನರ್ವಮಿಲ್ ಹತ್ತಿಗಿರಣಿ ಕಾರ್ಮಿಕರು, ಮಿನರ್ವಮಿಲ್ ಮ್ಯಾನೇಜ್‌ಮೆಂಟ್‌ನ ಅಕ್ರಮವಾದ ೪-೬-೮೯ರ ಲಾಕ್‌ಔಟ್‌ನ್ನು ಪ್ರತಿಭಟಿಸಿ, ಮಾನ್ಯ ಕಾರ್ಮಿಕ ಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಮತ್ತು ನಿನ್ನೆಯ ದಿವಸ ಸಭೆ ಮತ್ತು ಮೆರವಣಿಗೆ ನಡೆಸಿದ್ದಾರೆ. ಈ ಅಕ್ರಮ ಲಾಕ್‌ಔಟ್ ತೆರವು ಮಾಡುವುದು ಮತ್ತು ಬಡ ಕಾರ್ಮಿಕರ ನೆರವಿಗೆ ಬರುವುದು ಅತ್ಯಾವಶ್ಯಕ. ೪-೬-೮೯ರಿಂದ ಅಕ್ರಮ ಲಾಕ್‌ಔಟ್ ಮಾಡಿರುತ್ತಾರೆ. ತುರ್ತು ಕ್ರಮ ತೆಗೆದುಕೊಂಡು ಈ ಅಕ್ರಮ ಲಾಕ್‌ಔಟ್‌ನ್ನು ತೆರವು ಮಾಡಿಸಿ, ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸುವುದರ ಬಗ್ಗೆ ಸರಕಾರದ ನೆರವು ಕೋರುತ್ತೇನೆ. ಕಾರ್ಮಿಕರಿಗೆ ಆದ ಅನ್ಯಾಯವನ್ನು ಸರಿಪಡಿಸಲು ಸಹಾಯ ಕೋರಿ ಮಾನ್ಯ ಮಂತ್ರಿಗಳ ಹೇಳಿಕೆಯನ್ನು ಕೋರುತ್ತೇನೆ.

ಶ್ರೀ ಎಸ್. ಕೆ. ಕಾಂತಾ.—ದಿನಾಂಕ ೧೧-೪-೮೯ರಲ್ಲಿ ಮಿನರ್ವ ಮಿಲ್ಲಿನ ಆಡಳಿತ ವರ್ಗದವರು ಏಕಾಏಕಿಯಾಗಿ ಒಂದು ನೋಟೀಸ್ ಹಾಕಿ ಒಟ್ಟು ಕಾರ್ಮಿಕ ನಾಲ್ಕು ನವೀನ ವರ್ಗಗಳನ್ನು ಓಡಿಸಬೇಕೆಂದು ಆದೇಶ ಕೊಟ್ಟಿದ್ದಾರೆ. ಅದರ ವಿರುದ್ಧವಾಗಿ ಕಾರ್ಮಿಕ ಸಂಘದವರು ಒಂದು